# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 375 (365)
2. ವಿಧಾನ ಪರಿಷತ್ತಿನ ಸದಸ್ಯರ ಹೆಸರು : ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 16.02.2023
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿ

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸಂಚಾರಿ ಖಾಯಂ ಪೀಠ ಬೆಳಗಾವಿಯಲ್ಲಿ 2022 ಜುಲೈ ತಿಂಗಳಲ್ಲಿ ಸ್ಥಾಪಿಸಿದ್ದು, ಅದು ಇನ್ನೂ ಕಾರ್ಯಾರಂಭ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| (ಆ) | ಇದುವರೆಗೆ ಪೀಠದ ಕಟ್ಟಡ ನಿರ್ಮಾಣ ಕಾರ್ಯ ಪ್ರಾರಂಭವಾಗಿಲ್ಲದಿರುವುದು ಹಾಗೂ ಪೀಠಕ್ಕೆ ಬೇಕಾದ ಮೂಲ ಸೌಕರ್ಯ ಸಿಬ್ಬಂದಿ ಮತ್ತು ನಿರ್ವಹಣೆಗೆ ಬೇಕಾದ ಅನುದಾನ ಒದಗಿಸುವುದು ಯಾವಾಗ; | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಬೆಳಗಾವಿ ಖಾಯಂ ಸಂಚಾರಿ ಪೀಠಕ್ಕೆ ಅಗತ್ಯವಿರುವ 5000 ಚದರ ಅಡಿ ಸ್ಥಳಾವಕಾಶವನ್ನು ಒದಗಿಸುವಂತೆ ಜಿಲ್ಲಾಧಿಕಾರಿ, ಬೆಳಗಾವಿ ಜಿಲ್ಲೆ ಇವರನ್ನು ಕೋರಲಾಗಿದೆ. ಇದರೊಂದಿಗೆ ಖಾಸಗಿ ಕಟ್ಟಡಗಳನ್ನು ಸಹ ಗುರುತಿಸಲಾಗಿದ್ದು, ಸದರಿ ಕಟ್ಟಡದ ಬಾಡಿಗೆಯನ್ನು ನಿಗದಿಪಡಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯನ್ನು ಕೋರಲಾಗಿದೆ.<br><br>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಬೆಳಗಾವಿ ಖಾಯಂ ಸಂಚಾರಿ ಪೀಠಕ್ಕೆ ಅಗತ್ಯವಿರುವ 12 ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಬೆಳಗಾವಿ ಸಂಚಾರಿ ಪೀಠಕ್ಕೆ ಸ್ಥಳಾವಕಾಶ ದೊರೆತ ತಕ್ಷಣ ಅಗತ್ಯ ಸಿಬ್ಬಂದಿಯೊಂದಿಗೆ ಕಾರ್ಯಾರಂಭ ಮಾಡಲಾಗುವುದು ಹಾಗೂ ಅಗತ್ಯ ಅನುದಾನವನ್ನು ಒದಗಿಸಲಾಗುವುದು. |
| (ಇ) | ಉತ್ತರ ಕರ್ನಾಟಕದ 12 ಜಿಲ್ಲೆಗಳಿಗೆ ಅನುಕೂಲವಾಗುವ ಈ ಪೀಠ ರಚಿಸಿದ್ದಲ್ಲಿ ಗ್ರಾಹಕರು ವ್ಯಾಜ್ಯಗಳಿಗಾಗಿ ಬೆಂಗಳೂರಿಗೆ ಅಲೆದಾಡುವುದು ತಪ್ಪಿದಂತಾಗಿ ಅನುಕೂಲವಾಗುವುದಿಲ್ಲವೇ; | ಹೌದು |
| (ಈ) | ಉತ್ತರ ಕರ್ನಾಟಕ ಜನರ ಆಶೋತ್ತರಕ್ಕೆ ಸ್ಪಂದಿಸುವ ಸದರಿ ಪೀಠದ ಕಾರ್ಯಾರಂಭಕ್ಕೆ ಸರ್ಕಾರ ಶೀಘ್ರವಾಗಿ ಕ್ರಮಗಳನ್ನು ಕೈಗೊಳ್ಳಲಾಗುವುದೇ? | "ಆ" ರಲ್ಲಿ ತಿಳಿಸಿರುವಂತೆ |

ಸಂಖ್ಯೆ: ಆನಾಸ 15 ಸಲಫ 2023

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ